# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ.ಸಿ. ನಂಃ 32/2017 ಸಿಡಬ್ಲೂ : 11 ಪಿಡಬ್ಲೂಃ 6

ಪ್ರಮಾಣವಚನ ದಿಃ 08-04-2025
ಬೋಧಿಸಲಾಯಿತು

ಹೆಸರು : ಪಂಚಾಕ್ಷರಿ

ತಂದೆ ಹೆಸರು : ವೀರಯ್ಯ ಸಾಲಿಮಠ

ವಯಸ್ಸು : 44 ವರ್ಷ

ಉದ್ಯೋಗ : ಪಿ.ಐ ಬೈಲಹೊಂಗಲ ಪೊಲೀಸ್ ಠಾಣೆ

ವಾಸಸ್ಥಳ : ಬೈಲಹೊಂಗಲ

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 07-05-2015 ರಿಂದ 12-10-2018 ವರೆಗೆ ಆರಕ್ಷಕ ವೃತ್ತ ನಿರೀಕ್ಷಕರು ಸೇಡಂ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ದಿಃ 29-11-2016 ರಂದು ಈ ಪ್ರಕರಣದ ಕಡತವನ್ನು ಚಾ ಸಾ 10 ರವರಿಂದ ಪಡೆದುಕೊಂಡು ಪರಿಶೀಲಿಸಲಾಗಿ ಅದೇ ದಿನ ಸರ್ಕಾರಿ ಆಸ್ಪತ್ರೆ ಸೇಡಂ ಗೆ ಭೇಟಿ ನೀಡಿ ಅಪಘಾತದಲ್ಲಿ ಮೃತ ಪಟ್ಟ ಈತನ ಶವಪಂಚನಾಮೆಯನ್ನು ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 08-30 ರಿಂದ 09-30 ರ ವರೆಗೆ ಜರುಗಿಸಿರುತ್ತೇನೆ. ಸಾಕ್ಷಿಯು ಸದರಿ ಶವ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 2 ಎಂದು ಗುರುತಿಸಲಾಗಿದೆ. ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ- 2(ಬಿ ಮತ್ತು ಸಿ) ಎಂದು ಗುರುತಿಸಲಾಯಿತು.

ದಿ.30-11-2016 ರಂದು ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿ ಸಾಕ್ಷಿದಾರರಾದ ಚಾ ಸಾ 4 ರವರು ತೋರಿಸಿದಂತೆ ಅಪಘಾತ ಸ್ಥಳನದ ಪಂಚನಾಮೆಯನ್ನು ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 09-00 ರಿಂದ 10-00 ಗಂಟೆಯ ವರೆಗೆ ಜರುಗಿಸಿರುತ್ತೇನೆ. ಸಾಕ್ಷಿಯು ಸದರಿ ಸ್ಥಳ ಪಂಚನಾಮೆಯನ್ನು ನೋಡಿ ಗುರತಿಸಿದ್ದು ಅದನ್ನು ಈಗಾಗಲೆ ನಿ ಪಿ 3 ಎಂದು ಗುರುತಿಸಲಾಗಿದೆ ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 3(ಬಿ)ಎಂದು ಗುರುತಿಸಲಾಯಿತು. ಸದರಿ ಪಂಚನಾಮೆಯ ಕಾಲಕ್ಕೆ ಅಪಘಾತಕ್ಕೆ ಒಳಗಾದ ಟಿಪ್ಪರ್ ನಂ. ಕೆ ಎ 32 ಸಿ 5379 ಹಾಗೂ ಮೊಟಾರು ಸೈಕಲ್ ನಂ. ಕೆ ಎ 33 ಜೆ 2042 ನೇದ್ದನ್ನು ಜಪ್ತಿ ಪಡೆದುಕೊಂಡು ನಿರೀಕ್ಷಣೆ ಕುರಿತು ಠಾಣೆಗೆ ತೆಗೆದುಕೊಂಡು ಹೋಗಿದ್ದು. ಅದೇ ರೀತಿ ಸಾಕ್ಷಿಯು ಪಂಚನಾಮೆಯ ಕಾಲಕ್ಕೆ ತೆಗೆದಿರುವ ಟಿಪ್ಪರ್ ಹಾಗೂ ಮೊಟಾರು ಸೈಕಲಿನ ಭಾವ

ಚಿತ್ರಗಳನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ನಿ ಪಿ 4 ರಿಂದ 7 ಎಂದು ಗುರುತಿಸಲಾಗಿದೆ. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 4(ಎ) ಹಾಗೂ ನಿ ಪಿ 7(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ಚಾ ಸಾ 4 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ.05-12-2016 ರಂದು ಈ ಪ್ರಕರಣದ ಆರೋಪಿಯಾದ ಬಸಪ್ಪ ಈತನಿಗೆ ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೆನೆ. ನಂತರ ಅದೇ ದಿನ ಅಪಘಾತ ಟಿಪ್ಪರ್ ವಾಹನವನ್ನು ಅದರ ಮಾಲೀಕರಿಗೆ ಇಂಡ್ಯೂಮಿನಿಟಿ ಬಾಂಡನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ಸದರಿ ಇಂಡ್ಯೂಮಿನಿಟಿ ಬಾಂಡನ್ ನೋಡಿ ಗುರುತಿಸಿದ್ದು ಅದನ್ನು ನಿ ಪಿ 9 ಎಂದು ಗುರುತಿಸಲಾಯಿತು. ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 9(ಎ) ಎಂದು ಗುರುತಿಸಲಾಯಿತು.

ದಿ. 22-12-2016 ರಂದು ಚಾ ಸಾ 9 ರವರಿಂದ ಎಂ ವಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಡಿಸಿದ್ದು ಅದನ್ನು ನಿ ಪಿ 10 ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ ಪಿ 10(ಎ) ಎಂದು ಗುರುತಿಸಲಾಯಿತು. ನಂತರ ಅದೇ ಚಾ ಸಾ 8 ರವರಿಂದ ಮೃತ ಯಲ್ಲಪ್ಪ ಈತನ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತೇನೆ. ಸಾಕ್ಷಿಯ ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿ ಪಿ 11 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿ ಪಿ 11(ಎ) ಎಂದು ಗುರುತಿಸಲಾಯಿತ. ನಂತರ ಅದೇ ದಿನ ಸದರಿ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

**ಪಾಟೀಸವಾಲು:** ಆರೋಪಿ ಪರ ವಕೀಲರಿಂದ ಃ

ನಾನು ದಿಃ 29-11-2016 ರಂದು ಈ ಪ್ರಕರಣದ ಕಡತವನ್ನು ಚಾ ಸಾ 10 ರವರಿಂದ ಪಡೆದುಕೊಂಡು ಪರಿಶೀಲಿಸಲಾಗಿ ಅದೇ ದಿನ ಸರ್ಕಾರಿ ಆಸ್ಪತ್ರೆ ಸೇಡಂ ಗೆ ಭೇಟಿ ನೀಡಿ ಅಪಘಾತದಲ್ಲಿ ಮೃತ ಪಟ್ಟ ಈತನ ಶವಪಂಚನಾಮೆಯನ್ನು ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 08-30 ರಿಂದ 09-30 ರ ವರೆಗೆ ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ದಿ.30-11-2016 ರಂದು ಅಪಘಾತ ನಡೆದ ಸ್ಥಳಕ್ಕೆ ಭೇಟಿ ನೀಡಿ ಸಾಕ್ಷಿದಾರರಾದ ಚಾ ಸಾ 4 ರವರು ತೋರಿಸಿದಂತೆ ಅಪಘಾತ ಸ್ಥಳನದ ಪಂಚನಾಮೆಯನ್ನು ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 09-00 ರಿಂದ 10-00 ಗಂಟೆಯ ವರೆಗೆ ಜರುಗಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಸದರಿ ಪಂಚನಾಮೆಯ ಕಾಲಕ್ಕೆ ಅಪಘಾತಕ್ಕೆ ಒಳಗಾದ ಟಿಪ್ಪರ್ ನಂ. ಕೆ ಎ 32 ಸಿ 5379 ಹಾಗೂ ಮೊಟಾರು ಸೈಕಲ್ ನಂ. ಕೆ ಎ 33 ಜೆ 2042 ನೇದ್ದನ್ನು ಜಪ್ತಿ ಪಡೆದುಕೊಂಡು ನಿರೀಕ್ಷಣೆ ಕುರಿತು ಠಾಣೆಗೆ ತೆಗೆದುಕೊಂಡು ಹೋಗಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ದಿನ ಸಾಕ್ಷಿದಾರರಾದ ಚಾ ಸಾ 4 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಿ.05-12-2016 ರಂದು ಈ ಪ್ರಕರಣದ ಆರೋಪಿಯಾದ ಬಸಪ್ಪ ಈತನಿಗೆ ದಸ್ತಗಿರಿ ಮಾಡಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೆನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅದೇ ದಿನ ಅಪಘಾತ ಟಿಪ್ಪರ್ ವಾಹನವನ್ನು ಅದರ ಮಾಲೀಕರಿಗೆ ಇಂಡ್ಯೂಮಿನಿಟಿ ಬಾಂಡನ್ನು ಪಡೆದುಕೊಂಡು ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ದಿ. 22-12-2016 ರಂದು ಚಾ ಸಾ 9 ರವರಿಂದ ಎಂ ವಿ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅದೇ ಚಾ ಸಾ 8 ರವರಿಂದ ಮೃತ ಯಲ್ಲಪ್ಪ ಈತನ ಶವ ಪರೀಕ್ಷಾ ವರದಿಯನ್ನು ಸ್ವೀಕರಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಅದೇ ದಿನ ಸದರಿ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ
**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

ಪ್ರ. ದ. ನ್ಯಾ. ದಂ. ಸೇಡಂ.